## 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 12724/2008

| | |
|---|---|
| ಸಾಕ್ಷಿದಾರರ ಹೆಸರು | ಜಿ. ರಾಮಕೃಷ್ಣ |
| ತಂದೆಯ ಹೆಸರು | ಲೇಟ್. ಗಿರಿಯಪ್ಪ |
| ವಯಸ್ಸು | 75 ವರ್ಷ |
| ಉದ್ಯೋಗ | ನಿವೃತ್ತ ಸರ್ಕಾರಿ ನೌಕರ |
| ವಾಸ | ಹೌಸಿಂಗ್ ಬೋರ್ಡ ಕಾಲೋನಿ, ಬೆಂಗಳೂರು. |
| ಪ್ರಮಾಣೀಕರಿಸಿದ ದಿನಾಂಕ | 24/05/2023 |

**ಮುಖ್ಯ ವಿಚಾರಣೆ : ಆರೋಪಿ ಪರ ಶ್ರೀ. ಎಸ್.ಎಮ್.ಟಿ. ವಕೀಲರಿಂದಃ**

ನಾನು ಶ್ರೀ. ದಯಾನಂದ ಗೃಹ ನಿರ್ಮಾಣ ಸಹಕಾರಿ ಸಂಘದ ಮಾಜಿ ಅಧ್ಯಕ್ಷನಾಗಿರುತ್ತೇನೆ. 1972 ರಲ್ಲಿ ಸದರಿ ಸಂಘ ನೊಂದಣಿಯಾಗಿರುತ್ತದೆ. ಇದರ ಉದ್ದೇಶ ಜಮೀನುಗಳನ್ನು ಕ್ರಯಕ್ಕೆ ಪಡೆದು, ಅಭಿವೃದ್ಧಿ ಪಡೆಸಿ ಸಂಘದ ಸದಸ್ಯರೊಳಗೆ ಹಂಚಿಕೆ ಮಾಡಿ ನೊಂದಣಿ ಮಾಡುವ ಉದ್ದೇಶ ಹೊಂದಿರುತ್ತದೆ. 1975 ರಲ್ಲಿ ನಾನು ಸದರಿ ಸಂಘದ ಸದಸ್ಯತ್ವವನ್ನು ಪಡೆದಿರುತ್ತೇನೆ. 1983 ರಲ್ಲಿ ನಾನು ಆಡಳಿತ ಮಂಡಳಿಗೆ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತೇನೆ. 1983 ನೇ ಇಸವಿಯಲ್ಲಿ ಸಂಘವು ಶ್ರೀಗಂಧದ ಕಾವಲು ಗ್ರಾಮದಲ್ಲಿ 15 ಎಕರೆ 14 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡು ಭೂ ಪರಿವರ್ತನೆ ಮಾಡಿಸಿ, ನಿವೇಶನಗಳನ್ನು ಮಾಡಿ ಹಂಚಲು ತೀರ್ಮಾನಿಸಿರುತ್ತದೆ. ಸಂಘದ ಹೆಸರಿನಲ್ಲಿ ಕೃಷಿ ಜಮೀನು ಇಲ್ಲದ ಕಾರಣ ನನ್ನ ಹೆಸರಿನಲ್ಲಿ ಹಾಗೂ ಸಂಘದ ಸದಸ್ಯರಾದ 1 ನೇ ಆರೋಪಿ ಹೊನ್ನಗಂಗಯ್ಯರವರ ಹೆಸರಿನಲ್ಲಿ ಖರೀದಿಸಲು

ತೀರ್ಮಾನಿಸಿರುತ್ತದೆ. ಸದರಿ 15 ಎಕರೆ 14 ಗುಂಟೆ ಜಮೀನನ್ನು ನನ್ನ ಮತ್ತು 1 ನೇ ಆರೋಪಿಯ ಹೆಸರಿನಲ್ಲಿ ಖರೀದಿಸಿ 150 ನಿವೇಶನಗಳನ್ನು ಮಾಡಿ, 150 ಜನ ಸದಸ್ಯರುಗಳಿಗೆ ಹಂಚಿಕೆ ಮಾಡಿ ಅವರು ಹೆಸರುಗಳಿಗೆ ನೊಂದಣಿ ಮಾಡಿಸಲಾಗಿರುತ್ತದೆ.

ಫಿರ್ಯಾದುದಾರರಾದ ಸೀತಾರಾಮ ಅವರು ನನಗೆ ಕಳೆದ 20 ವರ್ಷಗಳಿಂದ ಪರಿಚಯವಿರುತ್ತದೆ. ಫಿರ್ಯಾದುದಾರರು ಸಂಘದ ಸದಸ್ಯರಾಗಿರಲಿಲ್ಲ. ಸುಮಾರು 20 ವರ್ಷಗಳ ಹಿಂದೆ ನನ್ನನ್ನು ಸಂಪರ್ಕಿಸಿ ತನಗೆ ಒಂದು ನಿವೇಶನವನ್ನು ಕೊಡಿಸಿ ಕೊಡಬೇಕೆಂದು ನನ್ನ ಬಳಿ ಕೇಳಿಕೊಂಡಿರುತ್ತಾರೆ. ಫಿರ್ಯಾದುದಾರರು ಸಂಘದ ಸದಸ್ಯರಲ್ಲದ ಕಾರಣ ಅವರಿಗೆ ನಿವೇಶನವನ್ನು ಹಂಚಿಕೆ ಮಾಡಲು ಸಾಧ್ಯವಿಲ್ಲವೆಂದು ಸಂಘವು ತೀರ್ಮಾನಿಸಿರುತ್ತದೆ. ಅಂದಿನಿಂದ ಫಿರ್ಯಾದುದಾರರು ಹಲವಾರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಈ ಪ್ರಕರಣವನ್ನು ಸೇರಿಕೊಂಡು ಇತರೆ ಹಲವಾರು ಪ್ರಕರಣಗಳನ್ನು ನನ್ನ ಮತ್ತು ಸಂಘದ ವಿರುದ್ದ ದಾಖಲಿಸಿರುತ್ತಾರೆ. ಸಹಕಾರಿ ಇಲಾಖೆಯಲ್ಲಿ ವಿವಿಧ ಅಧಿಕಾರಿಗಳಿಗೆ ಸುಳ್ಳು ದೂರುಗಳನ್ನು ನೀಡುವ ಹವ್ಯಾಸವನ್ನು ಮಾಡಿಕೊಂಡಿರುತ್ತಾರೆ.

ಈ ಕೇಸಿನಲ್ಲಿ ಹಾಜರು ಪಡಿಸಿರುವ ನಿಪಿ-11 ಸೃಷ್ಟಿ ಮಾಡಿದ ದಾಖಲೆಯಾಗಿರುತ್ತದೆ. ನಿಪಿ-11 ರ ಮೂಲ ದಾಖಲೆಯನ್ನು ಫಿರ್ಯಾದುದಾರರು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-11 ಕ್ಕೆ ಸಂಬಂಧಪಟ್ಟಂತೆ ನಮ್ಮ ಸಂಘದ ಕಛೇರಿಯಲ್ಲಿ ನಿರ್ವಹಿಸಿರುವ ಯಾವುದೇ Register ನಲ್ಲಿ ಉಲ್ಲೇಖ ಇರುವುದಿಲ್ಲ. ನಿಪಿ-11 ದಾಖಲೆಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಇದರಲ್ಲಿ ನನ್ನ ಸಹಿ ಇರುವುದಿಲ್ಲ. ಹಣ ಸಂದಾಯವಾದಾಗ ರಶೀದಿಗಳನ್ನು ಸಂಘದ ಕಾರ್ಯದರ್ಶಿಯವರು ನೀಡಬೇಕಾಗುತ್ತದೆ. ದೂರುದಾರರು ನಿಪಿ-11 ರಶೀದಿಯನ್ನು ರಾಮದಾಸ ಅವರ ಕಡೆಯಿಂದ

ಪಡೆದಿರುವುದಾಗಿ ಹೇಳಿರುತ್ತಾರೆ. ರಾಮದಾಸ ಅವರು ದಿನಾಂಕ 01/04/2018 ರಂದು ಸಂಘಕ್ಕೆ ಒಂದು ಪತ್ರವನ್ನು ಬರೆದು, ಸೀತಾರಾಮ ಎಂಬುವವರು ಸಂಘದ ಸದಸ್ಯರಾಗಿರುವುದು ಮತ್ತು ಅವರು ಸಂಘಕ್ಕೆ ರೂ. 2,000/- ಪಾವತಿಸಿರುವುದು ವಿಷಯ ತನಗೆ ಗೊತ್ತಿಲ್ಲವೆಂದು ಮತ್ತು ತಾನು ಸಹ ಸೀತಾರಾಮ ಅವರ ಪರವಾಗಿ ಸಂಘಕ್ಕೆ ರೂ. 2,000/- ಹಣವನ್ನು ಪಾವತಿಸಿಲ್ಲವೆಂದು ಪತ್ರ ಬರೆದಿರುತ್ತಾರೆ.

**(ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ದಿನಾಂಕ 19/06/2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಆರೋಪಿ ಪರ ಶ್ರೀ. ಎಸ್.ಎಮ್.ಟಿ. ವಕೀಲರಿಂದಃ**

4. ಫಿರ್ಯಾದಿದಾರರು ನಿಪಿ-11 ಮತ್ತು 13 ದಾಖಲೆಗಳನ್ನು ಸೃಷ್ಟಿಸಿ ದುರುಪಯೋಗಪಡಿಸಿಕೊಂಡಿರುತ್ತಾರೆ. ನಿಪಿ-13(ಎ) ನನ್ನ ಸಹಿ ಆಗಿರುವುದಿಲ್ಲ. ನಮ್ಮ ಸಂಘದ ಕ್ಯಾಶ ಪುಸ್ತಕದಲ್ಲಾಗಲೀ ಅಥವಾ ರಶೀದಿ ಪುಸ್ತಕದಲ್ಲಾಗಲೀ ನಿಪಿ-13 ರ ವಿವರ ಇರುವುದಿಲ್ಲ. ಫಿರ್ಯಾದುದಾರರು ನಮ್ಮ ಸಂಘಕ್ಕೆ ಯಾವತ್ತೂ ಹಣ ಪವತಿಸಿರುವುದಿಲ್ಲ. ನಮ್ಮ ಸಂಘದ ರಶೀದಿ ಮತ್ತು ಕ್ಯಾಶ ಪುಸ್ತಕದ ಪ್ರಕಾರ ರಶೀದಿ ನಂ.21 ರ ಮೂಲಕ ಶ್ರೀಮತಿ ಸ್ವರ್ಣಲತಾ ಅವರು ದಿನಾಂಕ 08/07/1988 ರಂದು ರೂ.253.58/- ಹಣ ಪವತಿಸಿರುತ್ತಾರೆ. ದಿನಾಂಕ 04/09/2001 ರಂದು ಕೆ. ರವೀಂದ್ರ ರವರು ನಿವೇಶನ ಠೇವಣಿಯಗಿ ರೂ. 30,000/- ಹಣವನ್ನು ಸಂಘಕ್ಕೆ ನೀಡಿದ್ದು, ಸಂಘವು ರಶೀದಿ ನಂ. 29 ನ್ನು ಸದರಿಯವರಿಗೆ ನೀಡಿರುತ್ತದೆ. ನಿಪಿ-13 ಸಹ ರಶೀದಿ ನಂ. 29 ಆಗಿದ್ದು, ನಿಪಿ-13 ಸೃಷ್ಟಿ ಮಾಡಿದ ದಾಖಲೆಯಾಗಿದ್ದು, ಅದರಲ್ಲಿರುವ ಸಹಿ ನನ್ನದಲ್ಲ. ರಶೀದಿ ನಂ. 21 ಮತ್ತು 29 ರ ಮೂಲ ದಾಖಲೆಗಳನ್ನು 9 ನೇ ಎ.ಸಿ.ಎಮ್.ಎಮ್, ನ್ಯಾಯಾಲಯದ ಸಿ.ಸಿ.ನಂ. 12771/2021 ರಲ್ಲಿ ಹಾಜರುಪಡಿಸಿರುತ್ತೇನೆ. ಆದ್ದರಿಂದ ಈ ನ್ಯಾಯಾಲಯದಲ್ಲಿ ಸದರಿ ದಾಖಲೆಗಳ ದೃಡೀಕೃತ ಪ್ರತಿಗಳನ್ನು ಕೊಟಿರುತ್ತೇನೆ. ನಿಪಿ-11 ಮತ್ತು 13 ದಾಖಲೆಗಳನ್ನು ಫಿರ್ಯಾದುದಾರರು ದುರುಪಯೋಗಪಡಿಸಿಕೊಂಡ ಬಗ್ಗೆ ನಾನು ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಮೊ.ಸಂ.148/2009 ರಂತೆ ದೂರು ದಾಖಲಾಸಿರುತ್ತೇನೆ. ಸದರಿ ಪ್ರಕರಣದ ಪ್ರ.ವ ವರದಿಯ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ಪೊಲೀಸರು ಸದರಿ ಪ್ರಕರಣದಲ್ಲಿ ಬಿ ಅಂತಿಮ

ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಗೆ ನಾನು ತಕರಾರು ಸಲ್ಲಿಸಿರುತ್ತೇನೆ. ಪ್ರರಾಮದಾಸ ಅವರು ನಮ್ಮ ಸಂಘಕ್ಕೆ ಬರೆದ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಡಿ-7 ಎಂದು ಫಿರ್ಯಾದಿ ಪರ ವಕೀಲರ ತಕರಾರಿಗೆ ಒಳಪಡಿಸಿ ಗುರುತಿಸಲಾಯಿತು. ಫಿರ್ಯಾದಿದಾರರು ಸಂಘದ ವಿರುದ್ದ ಸಹಕಾರ ಸಂಘಗರ ಸಂಯುಕ್ತ ನಿಭಂದಕರ ಕಛೇರಿಯಲ್ಲಿ ದೂರು ಅರ್ಜಿ ಸಲ್ಲಿಸಿರುತ್ತಾರೆ. ಸಹಕಾರ ಸಂಘಗರ ಸಂಯುಕ್ತ ನಿಭಂದಕರು ನಿಡಿ-1 ಮತ್ತು 2 ರಂತೆ ಆದೇಶಗಳನ್ನು ಮಾಡಿರುತ್ತಾರೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ದಿನಾಂಕ 28/06/2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಆರೋಪಿ ಪರ ಶ್ರೀ. ಎಸ್.ಎಮ್.ಟಿ. ವಕೀಲರಿಂದಃ**

5. ನಿಪಿ-14 ನ್ನು ನೋಡುತ್ತಿದ್ದು, ಇದು ನಿವೇಶನ ಹಂಚಿಕೆಯ ಪತ್ರವಾಗಿರುತ್ತದೆ. ಸದರಿ ಪತ್ರವನ್ನು ಸಿ.ಎಮ್. ಮರಿಯಪ್ಪ ರವರು ಸೀತಾರಾಮರವರಿಗೆ ಬರೆದಿರುತ್ತಾರೆ. ಸದರಿ ಪತ್ರದಲ್ಲಿ ನನ್ನ ಹೆಸರು ನಮೂದಿಸಿದ್ದು, ಸದರಿ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಸದರಿ ಪತ್ರವನ್ನು ನಮ್ಮ ಸಂಘದಿಂದ ಕೊಟ್ಟಿರುವುದಿಲ್ಲ. ಸದರಿ ನಿಪಿ-14 ಒಂದು ಕೊಟ್ಟಿ ನಿವೇಶನ ಹಂಚಿಕೆ ಪತ್ರವಾಗಿರುತ್ತದೆ. ಈ ಪ್ರಕರಣದಲ್ಲಿ ಫಿರ್ಯಾದುದಾರರು ಸಂಘದ ವಿರುದ್ದ ದೂರನ್ನು ದಾಖಲಿಸದೆ ನನ್ನ ವಿರುದ್ದ ಸುಳ್ಳು ದೂರನ್ನು ಕೊಟ್ಟಿರುತ್ತಾರೆ. ನಾನು ಸಂಘದ ಪರವಾಗಿ ತೀರ್ಮಾನಗಳನ್ನು ತೆಗೆದುಕೊಂಡಿದ್ದೇನೆ ಹೊರತು ಯಾವುದೇ ವೈಯಕ್ತಿಕ ತೀರ್ಮಾನಗಳನ್ನು ತೆಗೆದುಕೊಂಡಿಲ್ಲ. ಫಿರ್ಯಾದುದಾರರು ಅಕ್ರಮವಾಗಿ ನಿವೇಶನವನ್ನು ಪಡೆಯುವ ಸಲುವಾಗಿ ನನ್ನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ನನ್ನ ಮೇಲೆ ಒತ್ತಡ ಹೇರಿರುತ್ತಾರೆ. ಫಿರ್ಯಾದುದಾರರು ನನ್ನ ವಿರುದ್ದ 24 ನೇ ಎ.ಸಿ.ಎಮ್,ಎಮ್, ನ್ಯಾಯಾಲಯದಲ್ಲಿ ಸಿ.ಸಿ. 25865/2010 ರಂತೆ ಮಾನ ನಷ್ಟ ಮೊಕದ್ದಮೆ ಹೂಡಿದ್ದು, ಸದರಿ ಪ್ರಕರಣ ವಜಾ ಆಗಿರುತ್ತದೆ. ಫಿರ್ಯಾದುದಾರರು ನನ್ನ ವಿರುದ್ದ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳಿರುತ್ತಾರೆ. ನಾನು ಯಾವುದೇ ಅಪರಾಧ ಮಾಡಿಲ್ಲದೇ ಕಾರಣ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಫಿರ್ಯಾದುದಾರರು ಕಾಲಾವಕಾಶ ಕೋರಿರುತ್ತಾರೆ, ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**<u>ಸಾಕ್ಷಿಯನ್ನು ದಿನಾಂಕ 01/07/2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: ಫಿರ್ಯಾದಿ ಪರ ಶ್ರೀ. ಎಸ್.ಎಸ್.ಎಮ್. ವಕೀಲರಿಂದಃ</u>**

6. ನಾನು ಎಮ್.ಎಸ್ಸಿ ಪದವಿದರ. ನಾನು 1975 ರಲ್ಲಿ ದಯಾನಂದ ಗೃಹ ನಿರ್ಮಾಣ ಸಂಘದ ಸದಸ್ಯನಾಗಿರುತ್ತೇನೆ. ಸದರಿ ಸಂಸ್ಥೆಯು 1972 ರಲ್ಲಿ ಪ್ರಾರಂಭವಾಗಿರುತ್ತದೆ. 1972 ರಲ್ಲಿ ನಾನು ಸಂಘದ ಸದಸ್ಯನಾಗಿರಲಿಲ್ಲ. ನನಗೆ ಸದರಿ ಸಂಘದಲ್ಲಿ ಪದಾಧಿಕಾರಿಯಾಗಿ ಸುಮಾರು 25 ವರ್ಷಗಳ ಅನುಭವ ಇರುತ್ತದೆ. ನನಗೆ ಸಂಘದ ಆಡಳಿತದ ಬಗ್ಗೆ ಪೂರ್ಣ ಮಾಹಿತಿ ಇದೆ ಎಂದರೆ ಸರಿ. ಸದರಿ ಸಂಘವು ಸ್ಥಾಪನೆಯಾದ ದಾಖಲೆಗಳನ್ನು ನಾನು ನೋಡಿಲ್ಲ. ನಾನು ಸಂಘದ ನಿರ್ದೇಶಕನಾದ ನಂತರ ನನ್ನ ಪಾತ್ರದ ಬಗ್ಗೆ ನಾನು ತಿಳಿದುಕೊಂಡೆ. ಸಂಘವು ಯಾವ ಕಾರಣಕ್ಕೆ ಸ್ಥಾಪನೆಯಾಯಿತು ಮತ್ತು ಅದರ ಉದ್ದೇಶಗಳು ಏನೆಂದು ನಾನು ತಿಳಿದುಕೊಂಡಿರುತ್ತೇನೆ. ನಮ್ಮ ಸಂಘದ ದೆಯೋದ್ದೇಶಗಳನ್ನು ಜಂಟಿ ನಿಭಂದಕರಿಗೆ ಮತ್ತು ಉಪನಿಭಂದಕರಿಗೆ ಮನವರಿಕೆ ಮಾಡಿ ಕೊಟ್ಟು ನಮ್ಮ ಸಂಘವನ್ನು ಸ್ಥಾಪಿಸಿರುತ್ತೇವೆ ಎಂದರೆ ಸರಿ. ಸಂಘ ಸ್ಥಾಪನೆಯಾದ ಬಗ್ಗೆ ಮತ್ತು ಸಂಘ ಬೈಲಾಸ್ ಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ದಾಖಲೆಗಳನ್ನು ಈಗ ಹಾಜರು ಪಡಿಸಲು ಸಾಧ್ಯವಿಲ್ಲ, ಯಾಕೆಂದರೆ ನಾನು ಈಗ ಸಂಘದ ಪದಾಧಿಕಾರಿಯಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯದ ಮೂಲಕ ತರಿಸಿಕೊಳ್ಳಲು ನನ್ನ ಅಭ್ಯಂತರವಿರುವುದಿಲ್ಲ. ನಾನು 1975 ರಲ್ಲಿ ಸದಸ್ಯತ್ವವನ್ನು ಪಡೆದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನನ್ನಿಂದ ಸಾಧ್ಯವಿಲ್ಲ. ಸಂಘದ ಸದಸ್ಯತ್ವ ಪಡೆದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ.

7. ನಾನು ನಿರ್ದೇಶಕನಾಗಿದ್ದಾಗ ಪ್ರತಿ ವರ್ಷವು ಸಾಮಾನ್ಯ ಸಭೆಯನ್ನು ಕರೆಯುತ್ತಿದ್ದೇವು ಎಂದರೆ ಸರಿ. ಸದರಿ ಸಾಮಾನ್ಯ ಸಭೆಯ ಠರಾವುಗಳ ಬಗ್ಗೆ ಜಂಟಿ ನಿಭಂದಕರಿಗೆ ಮಾಹಿತಿ ನೀಡುತ್ತಿದ್ದೇವು. ನಾನು ಸಂಘದ ಸದಸ್ಯನಾಗಿದ್ದುದರಿಂದ ನನ್ನನ್ನು ನಿರ್ದೇಶಕನನ್ನಾಗಿ ನಾಮ ನಿರ್ದೇಶನ ಮಾಡಿರುತ್ತಾರೆ. 1975 ರಲ್ಲಿ ಸಂಘದ ಚುನಾವಣೆಯ ಬಗ್ಗೆ ನನಗೆ ಮಾಹಿತಿ ಇಲ್ಲ. 1972 ರಿಂದ 1975 ರ ಸಮಯದಲ್ಲಿ ಚುನಾವಣೆಗಳಾದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಂಘದ ಮೊದಲನೇ ಸದಸ್ಯರು ಯಾರು ಎಂದು ನನಗೆ ಗೊತ್ತಿಲ್ಲ. 1975 ರಲ್ಲಿ ಸಂಘದ ಸದಸ್ಯರ ಪೈಕಿ ನಾನು ಮೊದಲಿಗ ಎಂದರೆ ಸರಿ. ಸಂಘದ ಸದಸ್ಯರ ಪಟ್ಟಿಯ ದೃಡೀಕೃತ ನಕಲನ್ನು ಸಾಕ್ಷಿದಾರರಿಗೆ ವಕೀಲರು ತೋರಿಸಿದ್ದು, ಸಾಕ್ಷಿದಾರರು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-62 ಎಂದು ಗುರುತಿಸಲಾಯಿತು. ಸಂಘದ ಸದಸ್ಯರ ವಿವರಗಳನ್ನು ಒಬ್ಬರೇ ವ್ಯಕ್ತಿ ತಮ್ಮ ಕೈಬರಹದಲ್ಲಿ ಬರೆದಿರುತ್ತಾರೆ ಎಂದರೆ ಸರಿ. 2006 ರಲ್ಲಿ ಸಹಕಾರ ಸಂಘಗಳ ನಿಭಂದಕರು ಸಂಘದ ಬಗೆ ಮಾಹಿತಿ ಕೇಳಿದಾಗ ನಾವು ನಮ್ಮ ಅನುಕೂಲಕ್ಕೆ ತಕ್ಕಂತೆ ಸಂಘದ ಸದಸ್ಯರುಗಳ ಹೆಸರು ಬರೆದು ನಿಪಿ-62 ರಂತೆ ನಿಭಂದಕರ ಮುಂದೆ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. 1972 ರಿಂದ 1975 ರವರೆಗಿನ ಸದಸ್ಯರ ವಿವರಗಳು ನಿಪಿ-62 ರಲ್ಲಿ ಇಲ್ಲ ಎಂದರೆ ಸರಿ. 1975 ರಿಂದ 1980 ರವರೆಗೆ ಸಂಘದ ನಿರ್ದೇಶಕರು ಯಾರು ಇದ್ದರು ಎಂದು ನನಗೆ ನೆನಪಿಲ್ಲ. 1980 ರ ನಂತರ ಯಾರು ನಿರ್ದೇಶಕರು ಇದ್ದರು ಎಂದು ನನಗೆ ನೆನಪಿಲ್ಲ. 1983 ರಿಂದ 2010 ರವರೆಗೆ ನಾನು ಕಾರ್ಯದರ್ಶಿಯಾಗಿದ್ದೆ. ನಾನು ಸರ್ಕಾರಿ ನೌಕರಿಯಲ್ಲಿದ್ದರೂ ಸಹ ಕಾರ್ಯದರ್ಶಿಯಾಗಿ ಕೆಲಸ ಮಾಡಲು ನಮ್ಮ ಇಲಾಖೆಯಿಂದ ನಾನು ಅನುಮತಿ ಪಡೆದಿದ್ದೆ, ಆದರೆ ಆ ದಾಖಲೆಯನ್ನು ಹಾಜರುಪಡಿಸಿಲ್ಲ.

8. ನಮ್ಮ ಸಂಘದ ಹೆಸರಿನಲ್ಲಿ ಯಾವುದೇ ಕೃಷಿ ಭೂಮಿಯನ್ನು ಖರೀದಿಸಿರುವುದಿಲ್ಲ. ಸಂಘದ ಹೆಸರಿಗೆ ನಾವು ಕೃಷಿ ಭೂಮಿಯನ್ನು

ಖರೀದಿಸುತ್ತೇವೆ ಎಂದು ನಾವು ನಿಭಂದಕರ ಮುಂದೆ Undertake ಮಾಡಿರುವುದಿಲ್ಲ. ನನ್ನ ಹೆಸರಿನಲ್ಲಿ ಹಾಗೂ 2 ನೇ ಆರೋಪಿಯ ಹೆಸರಿನಲ್ಲಿ ಸಂಘದ ಪರವಾಗಿ ಕೃಷಿ ಭೂಮಿಯನ್ನು ಖರೀದಿಸಲು ನಿಭಂದಕರಿಂದ ಅನುಮತಿ ಪಡೆದಿರುವುದಿಲ್ಲ. ನಿರ್ದೇಶಕ ಮಂಡಳಿಯಿ ಅಭಿಪ್ರಾಯದಂತೆ ನನ್ನ ಮತ್ತು 2 ನೇ ಆರೋಪಿಯ ಹೆಸರಿನಲ್ಲಿ ಜಮೀನನ್ನು ಖರೀದಿಸಲಾಗಿದೆ. ಈ ರೀತಿ ನಿರ್ದೇಶಕರ ಮಂಡಳಿಯಲ್ಲಿ ತೀರ್ಮಾನವಾದ ಬಗ್ಗೆ ಠರಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ಮತ್ತು 2 ನೇ ಆರೋಪಿಯ ಹೆಸರಿನಲ್ಲಿ ಖರೀದಿಸಿದ ಜಮೀನುಗಳನ್ನು ಭೂ ಪರಿವರ್ತನೆ ಮಾಡಿಸಿ ನಿವೇಶನಗಳನ್ನು ಮಾಡಿ 152 ಜನ ಸದಸ್ಯರಿಗೆ ಹಂಚಿಕೆ ಮಾಡಿರುತ್ತೇವೆ. ಉಳಿದ ಜಮೀನು ಹೊನ್ನಗಂಗಯ್ಯ ರವರ ಹೆಸರಿನಲ್ಲಿದ್ದು, ಆತನಿಗೆ ಅನಾರೋಗ್ಯವಾಗಿದ್ದರಿಂದ ಆತನ ಅಣ್ಣ ಎಮ್.ಜಿ. ಗಂಗಯ್ಯ ನವರ ಹೆಸರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ. ಹೊನ್ನಗಂಗಯ್ಯರವರ ಹೆಸರಿನಲ್ಲಿರುವ ಜಮೀನನ್ನು ಆತನ ಅಣ್ಣನಿಗೆ ದಾನಪತ್ರ ಮಾಡಿಕೊಡಲು ಕಾನೂನಿನಲ್ಲಿ ಅವಕಾಶವಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಎಮ್.ಜಿ. ಗಂಗಯ್ಯ ರವರು ನಮ್ಮ ಸಂಘದ ನಿರ್ದೇಶಕರಾಗಿದ್ದರು. ದಾನಪತ್ರ 2015 ಅಥವಾ 2016 ರಲ್ಲಿ ಆಗಿರಬಹುದು. 15 ಎಕರೆ 14 ಗುಂಟೆ ಜಮೀನಿನಲ್ಲಿ ಎಷ್ಟು ನಿವೇಶನಗಳನ್ನು ಮಾಡಬಹುದು ಎಂದರೆ ಬಿ.ಡಿ.ಎ ನಿಯಮಾವಳಿಗಳ ಪ್ರಕಾರ 1 ಎಕರೆ ಜಮೀನಿನಲ್ಲಿ 30X40 ಅಳತೆಯ 16 ನಿವೇಶನಗಳನ್ನು ಮಾಡಬಹುದು. ಎಮ್.ಜಿ. ಗಂಗಯ್ಯರವರ ಹೆಸರಿನಲ್ಲಿ ಒಟ್ಟು 2 ಎಕರೆ 5½ ಗುಂಟೆ ಜಮೀನು ಇದೆ. ಸಾಕ್ಷಿಗೆ ಒಂದು ದಾಖಲೆಯ ದೃಡೀಕೃತ ನಕಲನ್ನು ತೋರಿಸಿದ್ದು, ಸದರಿ ದಾಖಲೆಯು ಅದು ನನ್ನ ವಿರುದ್ದ ಹಾಕಿರುವ ವಾದ ಪತ್ರದ ದೃಡೀಕೃತ ನಕಲು ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ-63 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಆದೇಶದ ಪತ್ರದ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-64 ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**